(ದಿನಾಂಕಃ**24/03/2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ –**

12. ನನ್ನ ಈ ಮುಂಚಿನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಪಂಚನಾಮೆಯಡಿ ಜಪ್ತಿ ಮಾಡಲಾದ ಸ್ವತ್ತುಗಳನ್ನು ತೋರಿಸಿದರೆ ಗುರುತಿಸಬಲ್ಲೆ. ಈಗ ತೋರಿಸಿದ ಸೀಲ್ಡ್ ಕವರುಗಳ ಮೇಲೆ ನನ್ನ ಸಹಿ ಇರುವ ಚೀಟಿಗಳನ್ನು ಅಂಟಿಸಲಾಗಿದೆ. (ಮಾನ್ಯ ಸಾಅರವರ ವಿನಂತಿ ಮೇರೆಗೆ ಸೀಲ್ಡ್ ಕವರುಗಳನ್ನು ತೆರೆದು ಅದರಲ್ಲಿಯ ಸ್ವತ್ತನ್ನು ಸಾಕ್ಷಿಗೆ ತೋರಿಸಲಾಯಿತು.) ಈಗ ತೋರಿಸಿದ ಸ್ವತ್ತು ಆ ದಿನ 2ನೇ ಆರೋಪಿ ಸ್ವಾಧೀನದಿಂದ ಜಪ್ತಿಮಾಡಲಾಗಿದೆ. ಆ ಪೈಕಿ ರೂ.1,000/-ವನ್ನು ಮುಮಾ-3 ಮತ್ತು ಒಂದು ಓಪ್ಪೋ ಮೊಬೈಲನ್ನು ಮುಮಾ-4 ಎಂದು ಗುರುತಿಸಲಾಯಿತು.

13. (ಮಾನ್ಯ ಸಾಅರವರ ವಿನಂತಿ ಮೇರೆಗೆ ಸೀಲ್ಡ್ ಕವರುಗಳನ್ನು ತೆರೆದು ಅದರಲ್ಲಿಯ ಸ್ವತ್ತನ್ನು ಸಾಕ್ಷಿಗೆ ತೋರಿಸಲಾಯಿತು.) ಈಗ ತೋರಿಸಿದ ಸ್ವತ್ತು ಆ ದಿನ ಮೃತ 1ನೇ ಆರೋಪಿ ಸ್ವಾಧೀನದಿಂದ ಜಪ್ತಿಮಾಡಲಾಗಿದೆ. ಆ ಪೈಕಿ ರೂ.1,500/-ವನ್ನು ಮುಮಾ-5 ಮತ್ತು ಒಂದು ಓಪ್ಪೋ ಮೊಬೈಲನ್ನು ಮುಮಾ-6 ಎಂದು ಗುರುತಿಸಲಾಯಿತು. ಇಂದು ಹಾಜರಿರುವ 2ನೇ ಆರೋಪಿ ಆ ದಿನ ನಾನು ದಸ್ತಗಿರಿ ಮಾಡಿದ ಆರೋಪಿಗಳ ಪೈಕಿ ಇರುತ್ತಾನೆ.

**ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ ಎಂ.ಎಂ.ಬಿ. ವಕೀಲರಿಂದಃ–**

14. ಗುನ್ನೆ ಜಾಗೆಯ ಕಚ್ಚಾ ನಕ್ಷೆ ತಯಾರಿಸಿದ್ದೇನೆ. ನಾನು ನಕ್ಷೆ ತಯಾರಿಸಿಲ್ಲ ಎನ್ನುವುದು ಸುಳ್ಳು. ಬಾತ್ಮಿ ಬಂದ ತಕ್ಷಣ ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿದೆ. ಬೆಳಿಗ್ಗೆ 9.30ಕ್ಕೆ ನಾನು ಇನ್ನೂ ಗುನ್ನೆ ಜಾಗೆಗೆ ಹೋಗಿರಲಿಲ್ಲ. ನಮ್ಮ ಕಾರ್ಯಾಲಯದಲ್ಲಿಯೇ ಕುಳಿತು ಪಂಚನಾಮೆ ಸೃಷ್ಟಿ ಮಾಡಿದ್ದೇವೆ ಎನ್ನುವುದು ಸುಳ್ಳು.

15. ನಿಪಿ-13ರಂತೆ ನಾನು ಮೇಲಾಧಿಕಾರಿಗಳಿಗೆ ಮನವಿ ಸಲ್ಲಿಸಿಲ್ಲ ಎನ್ನುವುದು ಸುಳ್ಳು. ನಿಪಿ-14ರಂತೆ ನಾನು ಮನವಿ ಸಲ್ಲಿಸಿಲ್ಲ ಮತ್ತು ಪಂಚರನ್ನು ಕಳಿಸಿ ಕೊಡುವಂತೆ ಕೇಳಿಲ್ಲ ಎನ್ನುವುದು ಸುಳ್ಳು. ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಗುನ್ನೆ ಜಾಗೆಯ ಹತ್ತಿರ ಶಾಲೆ ಇದೆ ಎನ್ನುವುದು ಸುಳ್ಳು. ಶಾಲೆಗೂ ಗುನ್ನೆ ಜಾಗೆಗೂ ಒಂದೂವರೆ ಕಿಮೀ ಅಂತರ ಇದೆ. ಗುನ್ನೆ ಜಾಗೆ ಹತ್ತಿರ ಯಾವಾಗಲೂ ಜನಸಂಚಾರ ಇರುತ್ತದೆ ಎನ್ನುವುದು ಸುಳ್ಳು.

16. ಸ್ಥಳೀಯ ಪಂಚರನ್ನು ಕರೆಸಲು ನನಗೆ ತೊಂದರೆ ಇರಲಿಲ್ಲ ಎನ್ನುವುದು ನಿಜ. 2ನೇ ಆರೋಪಿ ವಶದಿಂದ ನಾನು ಗಾಂಜಾ ಜಪ್ತಿಮಾಡಿಲ್ಲ ಎನ್ನುವುದು ಸುಳ್ಳು. ಅಂಕಿ-ಸಂಖ್ಯೆಗೋಸ್ಕರ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಪಂಚನಾಮೆಯಲ್ಲಿ ಜಪ್ತಿಮಾಡಲಾದ ದುಡ್ಡಿನ ನೋಟುಗಳ ವಿವರ ಬರೆದಿಲ್ಲ.

17. ದಾಳಿ ಕಾಲಕ್ಕೆ ತೆಗೆದುಕೊಂಡು ಹೋದ ತೂಕದ ಯಂತ್ರದ ವಿವರವನ್ನು ಪಂಚನಾಮೆ ಯಲ್ಲಿ ನಮೂದು ಮಾಡಿಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ಆರೋಪಿತರಿಂದ ಯಾವುದೇ ಸ್ವತ್ತನ್ನು ಜಪ್ತಿಮಾಡಿಲ್ಲ ಎನ್ನುವುದು ಸುಳ್ಳು. ಆರೋಪಿತರು ನೀಡಿದ ಯಾವುದೇ ಹೇಳಿಕೆ ಯನ್ನು ನಾನು ಬರೆದುಕೊಂಡಿಲ್ಲ ಎನ್ನುವುದು ನಿಜ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.